65

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\268\2014\ಸನಿಕಾಸ-2 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 10.1.2017

ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೊಡ್ಡಬಳ್ಳಾಪುರ ತಾಲ್ಲೂಕಿನ ರೋಜಿಪುರ ಗ್ರಾಮದ ಸ. ನಂ: 112ರಲ್ಲಿ ಸರ್ಕಾರಿ ಸ್ವಾಧೀನಲ್ಲಿರುವ ಹಾಗೂ ಸರ್ಕಾರಿ ಕಛೇರಿಗಳನ್ನು ಹೊರತುಪಡಿಸಿ ಖಾಸಗಿ ವ್ಯಕ್ತಿಗಳು ಅನಧಿಕೃತವಾಗಿ ಭೂ ಕಬಳಿಕೆ ಮಾಡಿರುವವರಿಂದ ವಶಪಡಿಸಿಕೊಂಡು ಪುನಃ ಸರ್ಕಾರದ ಸ್ವಾಧೀನಕ್ಕೆ ಪಡೆಯುವಂತೆ ಸಕ್ಷಮ ಪ್ರಾಧಿಕಾರಕ್ಕೆ ಶಿಪಾರಸ್ಸು ಮಾಡುವ ಕುರಿತು.

*******

ಶ್ರೀ.ಹರೀಶ್, ನಂ: 21/32, ಮಾತೃಶ್ರೀ, ಬ್ಯಾಟರಾಯನಪುರ, ಬೆಂಗಳೂರು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಆಯುಕ್ತರು, ನಗರಸಭೆ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ (2) ತಹಶೀಲ್ದರ್, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (3) ಶ್ರೀ. ಶಿವಕುಮಾರಯ್ಯ.ಎನ್., ತೋಟಗಾರಿಕೆ ಸಹಾಯಕ, ದೊಡ್ಡಬಳ್ಳಾಪುರ ತೋಟಗಾರಿಕೆ ಕ್ಷೇತ್ರ ರಾಜ್ಯ ವಲಯ, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ದೊಡ್ಡಬಳ್ಳಾಪುರ ಪಟ್ಟಣದ ಗಂಗಾಧರಪುರದ ಸ. ನಂ: 112 ತಿಮ್ಮನಕುಂಟೆ ಐತಿಹಾಸಿಕ ಬೈರೇಗೌಡರ ವಂಶಸ್ಥ ತಮ್ಮಣ್ಣ ಪಾಳೆಗಾರನ ಹೆಸರಿಟ್ಟು ಈ

64

ಊರಿನ ಆಳಿದ ಕೋನೆ ಪಾಳೇಗಾರನ್ನಾಗಿದ್ದು ಕ್ರಿ.ಶ., 1900-1910ರ ಆಸುಪಾಸಿನಲ್ಲಿ ದೊಡ್ಡಬಳ್ಳಾಪುರ ಆಳುತಿದ್ದು ಈತನ ಹೆಸರಿನಲ್ಲಿ ಕೆರೆಯನ್ನು ಅಭಿವೃದ್ಧಿಗೊಳಿಸಿ ಊರಿನವರು ಕುಡಿಯಲು ಹಾಗೂ ಕೃಷಿಗೆ ಇದರಲ್ಲಿಯ ನೀರನ್ನು ಉಪಯೋಗಿಸುತ್ತಿದ್ದರು. ಆದರೆ ಸುಮಾರು 40ವರ್ಷಗಳಿಂದ ಸರ್ಕಾರಿ ಅಧಿಕಾರಿಗಳು ಅತಿಕ್ರಮಿಸಿ, ಕುಂಟೆಯನ್ನು ಹಾಳು ಮಾಡಿ ಹರಿದು ಹಂಚಿರುತ್ತಾರೆ. ಸ್ವಲ್ಪ ಜಾಗವನ್ನು ತೋಟಗಾರಿಗೆ ಇಲಾಖೆ, ನಗರ ಸಭೆ, ಬಸ್ ನಿಲ್ದಾಣ, ಹಾಗೂ ಇತರೆ ಸರ್ಕಾರಿ ಕಛೇರಿಗೆ ಉಪಯೋಗಿಸಿರುತ್ತಾರೆ. ಇನ್ನುಳಿದ ಪ್ರದೇಶವನ್ನು ಅಧಿಕಾರಿಗಳ ಪ್ರಭಾವದಿಂದ ಬಲಾಡ್ಯರು ಅಕ್ರಮಿಸಿರುತ್ತಾರೆ. ಸುಳ್ಳು ದಾಖಲೆಗಳನ್ನು ಸೃಷ್ಠಿಸಿ ಮನೆ ಕಟ್ಟಿ ಬಾಡಿಗೆ ನೀಡಿರುತ್ತಾರೆ. ಆದ್ದರಿಂದ ಎದುರುದಾರರು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೆ ಹಫ್ತಾ ವಸೂಲಿ ಮಾಡಿಕೊಂಡು ಕಾಲಕಳೆಯುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಸೂಕ್ತ ತನಿಖೆ ಮಾಡಿ ಸರ್ಕಾರಿ ಜಾಗೆಯನ್ನು ವಶಪಡಿಸಿಕೊಳ್ಳಬೇಕೆಂದು ದೂರು ಸಲ್ಲಿಸಿದ್ದಾರೆ.

3) ಎದುರುದಾರ ನಂ:3 ರವರು ತಮ್ಮ ಆಕ್ಷೇಪಣೆಯಲ್ಲಿ ತಾನು ಸರ್ಕಾರಿ ಜಾರಿಯ ಬಗ್ಗೆ ಯಾವುದೇ ಸುಳ್ಳು ದಾಖಲೆಗಳನ್ನು ಸೃಷ್ಠಿಸಿರುವುದಿಲ್ಲ. ದಿ: 28.1.2010ರಂದು ಸರ್ವೆ ಮಾಡಿ ನೀಡಿರುವ ಸ್ಕೆಚ್ ಕಾಪಿಯಲ್ಲಿ ತೋರಿಸಿದಂತೆ ಹದ್ದುಗಳನ್ನು ಗುರುತಿಸಿ ಕಲ್ಲುಗಳನ್ನು ಹಾಕಿರುವುದಿಲ್ಲ. ಶ್ರೀ.ರಘುಪತಿ ಎನ್ನುವ ಕಂದಾಯ ನಿರೀಕ್ಷಕರ ಮೇಲೆ ಪೋಲೀಸರಿಗೆ ದೂರು ನೀಡಿ ಅವರು ಕಟ್ಟುತ್ತಿರುವ ಕಟ್ಟಡವನ್ನು ಸ್ಥಗಿತಗೊಳಿಸಿದ್ದು ಇರುತ್ತದೆ. ಆದ್ದರಿಂದ ತಾನು ಕಾನೂನು ಪ್ರಕಾರ ಕ್ರಮ ಕೈಗೊಂಡಿದ್ದು ತನನ್ನು ಪ್ರಕರಣದಿಂದ ಕೈಬಿಡಬೇಕೆಂದು ಕೇಳಿಕೊಂಡಿದ್ದಾರೆ.

4) ಎದುರುದಾರ ನಂ:1 ಮತ್ತು 2 ರವರು ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ.

5) ದೂರುದಾರರು ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

6. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಅ) "ದೊಡ್ಡಬಳ್ಳಾಪುರ ತಾಲ್ಲೂಕು ರೋಜಿಪುರ ಗ್ರಾಮ ಸ. ನಂ: 112 ಒಟ್ಟು ಕ್ಷೇತ್ರ 40 ಎ., ಇದರಲ್ಲಿ 20ಎ., ತೋಟಗಾರಿಕೆ ಇಲಾಖೆಯ ಹೆಸರಿನಲ್ಲಿ ಹಾಗೂ 20ಎ., ಪುರಸಭೆ ಹೆಸರಿನಲ್ಲಿ ಇರುವ ಪಹಣಿ ಪತ್ರಿಕೆ ಲಭ್ಯವಿರುತ್ತದೆ. ಇದರ ಜೊತೆಗೆ ಹಾಜರುಪಡಿಸಿದ ನಕ್ಷೆಯನ್ನು ಪರಿಶೀಲಿಸಿದಾಗ ಸ. ನಂ: 112ರಲ್ಲಿ ಸರ್ಕಾರಕ್ಕೆ ಸೇರಿದ ತೋಟಗಾರಿಗೆ ಇಲಾಖೆ ಫಾರಂ, ಬಸ್ಸ್ ನಿಲ್ದಾಣ, ಪುರಸಭೆ ಜಾಗೆ, ಸ್ಮಶಾನ, ಇವುಗಳು ಇರುತ್ತದೆ. ಆದರೆ ಇದೇ ಜಾಗೆಯಲ್ಲಿ ಸರ್ಕಾರಿ ಕಛೇರಿಗಳನ್ನು ಹೊರತು ಪಡಿಸಿ ಕೆಲವು ವ್ಯ ಕ್ತಿಗಳ ಅನಧಿಕೃತವಾಗಿ ಜಾಗೆಯನ್ನು ಬ್ಲಾಕ್ ನಂ: 1 ರಿಂದ 4ರ ವರೆಗೆ ಒತ್ತುವರಿ ಮಾಡಿದ ಬಗ್ಗೆ ನಮೂದಾಗಿರುತ್ತದೆ.

7) ಈ ಪ್ರಕರಣದಲ್ಲಿ ದೂರುದಾರರೇ ತಿಳಿಸುವ ಪ್ರಕಾರ ಸುಮಾರು ವರ್ಷಗಳಿಂದ ಅನೇಕ ಅಧಿಕಾರಿಗಳು ಇಲ್ಲಿ ಕೆಲಸ ಮಾಡಿ ಹೋಗಿದ್ದು ಅವರೆಲ್ಲರೂ ಕಾನೂನು ಬಾಹೀರವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ಖಾತೆಗಳನ್ನು ಸೃಷ್ಟಿಸಿದ್ದಾರೆಂದು ಆಪಾದಿಸಿದ್ದಾರೆ. ಆದ್ದರಿಂದ ನಿರ್ದಿಷ್ಟವಾಗಿ ಇದೇ ಅಧಿಕಾರಿಯು ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದಾನೆಂದು ಹೇಳಲಾಗುವುದಿಲ್ಲ. ಆದರೆ ಖಾಸಗಿ ವ್ಯಕ್ತಿಗಳು ಅನಧಿಕೃತವಾಗಿ ಅತಿಕ್ರಮಿಸಿದ ಈ ಸರ್ಕಾರಿ ಜಾಗೆಯನ್ನು ಪುನಃ ಸರ್ಕಾರದ ಸ್ವಾಧೀನಕ್ಕೆ ಪಡೆಯಲು ಸಾಧ್ಯವಿರುತ್ತದೆ. ದೊಡ್ಡಬಳ್ಳಾಪುರ ತಾಲ್ಲೂಕಿನ ರೋಜಿಪುರ ಗ್ರಾಮದ ಸ. ನಂ: 112ರಲ್ಲಿ ಸರ್ಕಾರಿ ಸ್ವಾಧೀನಲ್ಲಿರುವ ಹಾಗೂ ಸರ್ಕಾರಿ ಕಛೇರಿಗಳನ್ನು ಹೊರತುಪಡಿಸಿ ಖಾಸಗಿ ವ್ಯಕ್ತಿಗಳು ಅನಧಿಕೃತವಾಗಿ ಭೂ ಕಬಳಿಕೆ ಮಾಡಿರುವವರಿಂದ ವಶಪಡಿಸಿಕೊಂಡು ಪುನಃ ಸರ್ಕಾರದ ಸ್ವಾಧೀನಕ್ಕೆ ಪಡೆಯುವಂತೆ ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1) ರಡಿಯಲ್ಲಿ ನಿರ್ದೇಶಿಸುವುದು ಅಗತ್ಯವಾಗಿರುತ್ತದೆ. ಹಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ಆದೇಶಿಸುವ ಅಧಿಕಾರವನ್ನು ಕರ್ನಾಟಕ

ಲೋಕಾಯುಕ್ತ ಕಾಯಿದೆ 1984 ಕಲಂ 12(1)ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಹೊಂದಿದ್ದಾರೆ.

8) ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಮಾನ್ಯ ಉಪಲೋಕಾಯುಕ್ತ-2 ರವರಿಗೆ ತಿಳಿಸಲು ಹೇಳಿದೆ.

10/11/17

(ನ್ಯಾಯಾಮೂರ್ತಿ ಸುಬಾಷ್ ಬಿ ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.